**ಇಂದು ದಿಃ 15.05.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**
**ಮುಂದುವರಿದ ಪಾಟೀ ಸವಾಲು ಃ ಆರೋಪಿ ಪರ ಶ್ರೀ. ವಕೀಲರಿಂದಃ**

ನಾನು ನಡೆಸುತ್ತಿರುವ ಸೈಬರ್ ಸೆಂಟರ್ ಹೆಸರು ಸೂರ್ಯಪುತ್ರ. ಸುಮಾರು 15 ವರ್ಷಗಳಿಂದ ಸೈಬರ್ ಸೆಂಟರ್ ನಡೆಸುತ್ತಿದ್ದೇನೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ಆರೋಪಿ ಜೆರಾಕ್ಸ್ ಮತ್ತು ಪ್ರಿಂಟ್ ಔಟ್ ಪ್ರತಿ ಮಾಡಿಸಿಕೊಳ್ಳಲು ನನ್ನ ಸೈಬರ್ ಸೆಂಟರ್ ಗೆ ಬರುತ್ತಿದ್ದರು. ನನಗೆ ವಾರ್ಷೀಕವಾಗಿ 7–8 ಲಕ್ಷ ಆದಾಯ ಇದೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ. ಆರೋಪಿಗೆ ಹಣ ಕೊಡುವಾಗ ನಾನು ಮತ್ತು ಆರೋಪಿ ಮಾತ್ರ ಇದ್ದೆವು. ಇದಕ್ಕೂ ಮೊದಲು ಆರೋಪಿ ಮತ್ತು ನನಗೆ ಯಾವುದೇ ವ್ಯವಹಾರ ಇರಲಿಲ್ಲ. ಈ ಚೆಕ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಪಿ ನನ್ನನ್ನು ಎಷ್ಟು ಬಾರಿ ಭೇಟಿ ಮಾಡಿದ್ದಾರೆ ಎಂದರೆ ಅವರು ಆಗ್ಗಿಂದಾಗೆ ಸೈಬರ್ ಸೆಂಟರ್ ಗೆ ಬರುತ್ತಿದ್ದರು.

ದಿನಾಂಕ 09.09.2023 ರಂದು ಆರೋಪಿ ನನ್ನನ್ನು 2,65,000/– ಹಣ ಬೇಕೆಂದು ಕೇಳಿದ್ದರು. ಸದರಿ ಹಣ ನನಗೆ ವ್ಯವಸಾಯದಿಂದ ಬಂದಿತ್ತು. ಆರೋಪಿಗೆ ಒಂದೇ ಬಾರಿಗೆ 500 ರೂ ಮುಖಬೆಲೆಯ ನೋಟುಗಳನ್ನು ಕೊಟ್ಟಿದ್ದೇನೆ. ಬೈಲಕುಪ್ಪೆಯ ಸುನೀಲಕುಮಾರ ಎಂಬುವರು ನನಗೆ ಪರಿಚಯವಿಲ್ಲ. ಅವರು ಬೈಲಕುಪ್ಪೆಯಲ್ಲಿ ಹೊಂಡಾ ಆಕ್ಟಿವಾ ಶೋರೂಂ ನಡೆಸುತ್ತಿದ್ದಾರೆ ಎಂಬುದು ಗೊತ್ತಿಲ್ಲ. ಆರೋಪಿ ಮತ್ತು ಸುನೀಲಕುಮಾರ ನಡುವೆ 2021 ರ ಅಕ್ಟೋಬರ್ ತಿಂಗಳಲ್ಲಿ ಒಂದು ವ್ಯವಹಾರ ಆಗಿದೆ ಎಂದರೆ ಗೊತ್ತಿಲ್ಲ. 2021 ರಲ್ಲಿ ಆರೋಪಿ ಸುನೀಲಕುಮಾರವರ ಶೋರೂಂನಲ್ಲಿ Honda Activa ವಾಹನ ಖರೀದಿಸಲು 30 ಸಾವಿರ ಮುಂಗಡ ಹಣ ಕೊಟ್ಟು ವಾಹನ ಬುಕ್ ಮಾಡಿದ್ದರು ಎಂದರೆ ಗೊತ್ತಿಲ್ಲ. ಆರೋಪಿ ಸುನೀಲಕುಮಾರವರನ್ನು ಕುರಿತು ಈಗಾಗಲೇ 30 ಸಾವಿರ ರೂಪಾಯಿ ಮುಂಗಡ ಹಣ

ಕಟ್ಟಿರುವುದರಿಂದ ನನಗೆ ಹೊಸ ವಾಹನ ಕೊಟ್ಟರೆ ಉಳಿದ ಹಣ ಕಟ್ಟುವುದಾಗಿ ಹೇಳಿದ್ದರು ಎಂದರೆ ಗೊತ್ತಿಲ್ಲ. ಆರೋಪಿ ಸುನೀಲಕುಮಾರವರನ್ನು ಬೈಕ್ ಕೊಡುವಂತೆ ಪದೇ ಪದೇ ಕೇಳಿದ್ದರು ಸಹ ಬೈಕ್ ಕೊಟ್ಟಿಲ್ಲ ಎಂದರೆ ಗೊತ್ತಿಲ್ಲ.

2022 ರಲ್ಲಿ ಶೋರೂಂಗೆ ಬಂದಂತಹ ನೊಂದಣಿಯಾಗದ ಒಂದು ಹೊಂಡಾ ಆಕ್ಟಿವಾ ವಾಹನವನ್ನು ಸುನೀಲರವರು ಆರೋಪಿಗೆ ಕೊಟ್ಟಿದ್ದರು ಎಂಬುದು ಗೊತ್ತಿಲ್ಲ. ಅದೇ ವಾಹನವನ್ನು ಆರೋಪಿ 2022 ರಲ್ಲಿ ಹರೀಶ ಎಂಬುವರಿಗೆ ಮಾರಾಟ ಮಾಡುತ್ತಾರೆ ಎಂಬುದು ಗೊತ್ತಿಲ್ಲ. ಅದೇ ವಾಹನ 2022 ರಲ್ಲಿ ಹರೀಶರವರಿಗೆ ಕೊಟ್ಟಿದ್ದ ನಂತರ ಕಳ್ಳತನ ಆಗಿತ್ತು ಎಂದರೆ ಗೊತ್ತಿಲ್ಲ. ಕಳ್ಳತನವಾಗಿರುವ ವಾಹನವನ್ನು ಕೊಡುವಂತೆ ಸುನೀಲಕುಮಾರ ಆರೋಪಿಯನ್ನು ಪದೇ ಪದೇ ಕೇಳಿರುತ್ತಾರೆ ಎಂಬುದು ಗೊತ್ತಿಲ್ಲ. ಈ ವಿಚಾರವಾಗಿ ಸುನೀಲಕುಮಾರ ಬೈಲಕುಪ್ಪೆ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ದೂರಿನ ಮೇರೆಗೆ ಆರೋಪಿ ಮತ್ತು ಸುನೀಲಕುಮಾರ ಮಧ್ಯೆ ಪೊಲೀಸ್ ಠಾಣೆಯಲ್ಲಿ ರಾಜಿ ಸಂಧಾನ ಆಗಿದೆ ಎಂದರೆ ಗೊತ್ತಿಲ್ಲ. ಕಳ್ಳತನವಾಗಿರುವ ವಾಹನದ ಸಾಲದ ಹಣವನ್ನು ಕಟ್ಟಿಕೊಳ್ಳುವುದಾಗಿ ಆರೋಪಿ ಸುನೀಲಕುಮಾರರವರಿಗೆ ಒಪ್ಪಿಕೊಂಡಿದ್ದರು ಎಂದರೆ ಗೊತ್ತಿಲ್ಲ. ಆ ಸಂಬಂಧ ಸುನೀಲಕುಮಾರ ಭದ್ರತೆಗಾಗಿ ಒಂದು ಚೆಕ್ ಪಡೆದುಕೊಂಡಿದ್ದರು ಎಂದರೆ ಗೊತ್ತಿಲ್ಲ. ಆರೋಪಿ ನನಗೆ ಕೊಟ್ಟಿರುವ ಚೆಕ್ ನಂಬರ್ 000171 ಆಗಿರುತ್ತದೆ. ಅದರ ಅಕೌಂಟ್ ನಂಬರ್ ಗೊತ್ತಿಲ್ಲ. ನಿ.ಪಿ-1 ರಲ್ಲಿರುವ ಚೆಕ್ ನ್ನು ಆರೋಪಿ ಸುನೀಲಕುಮಾರರವರಿಗೆ ನೀಡಿರುತ್ತಾರೆ ಎಂದರೆ ಗೊತ್ತಿಲ್ಲ.

ಆರೋಪಿ ಪಡೆದುಕೊಂಡಿದ್ದ ಹೊಂಡಾ ಆಕ್ಟಿವಾ ಸಂಬಂಧ ಕೊಡಬೇಕಾಗಿದ್ದ ಹಣವನ್ನು 3 ತಿಂಗಳೊಳಗಾಗಿ ಕೊಡುವುದಾಗಿ ಒಪ್ಪಿಕೊಂಡಿದ್ದು ಸುನೀಲಕುಮಾರರವರಿಗೆ ಪ್ರಮಾಣ ಪತ್ರ

ಬರೆದುಕೊಟ್ಟು ಭದ್ರತೆಗಾಗಿ ಚೆಕ್ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ರೀತಿ ಹಣ ತೀರಿಸಿದ ನಂತರ ಚೆಕ್ ವಾಪಸ್ಸು ಕೊಡುವುದಾಗಿ ಸುನೀಲಕುಮಾರ ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ಆರೋಪಿ ಮತ್ತು ಸುನೀಲಕುಮಾರರವರ ನಡುವೆ ಆಗಿರುವ ಪ್ರಮಾಣ ಪತ್ರಕ್ಕೆ ಪ್ರಕಾಶ ಮತ್ತು ಅಬ್ದುಲ್ ಸಾಧಿಕ್ ಸಾಕ್ಷಿದಾರರಾಗಿದ್ದಾರೆ ಎಂದರೆ ಗೊತ್ತಿಲ್ಲ. ಆರೋಪಿಗೂ ನನಗೂ ಯಾವುದೇ ವ್ಯವಹಾರ ಆಗಿಲ್ಲದಿದ್ದರೂ ಸಹ ಅನ್ಯತಾ ಪಾಯಿದೆ ಹೊಂದಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೇ.ಕೇ.ಸರಿ. ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
***ಪಿರಿಯಾಪಟ್ಟಣ.***